860

ಮೈಸೂರ ಗೆಜಿಟ್ಟ

ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು.

ಬೆಂಗಳೂರು, ಶನಿವಾರ, ಡಿಸಂಬರ್ ತಾ|| 14, ಸನ 1889.

ಟಿಪ್ಪಣಿ ಈ ಭಾಗವನ್ನು ಪ್ರತ್ಯೇಕ ಕೀಲಿನ ಇಡುವ ಬ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು, ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟ್ ಇಲಾಖಾ.

ತಾರೀಖು 21ನೇ ಸೆಪ್ಟಂಬರ್ 1889.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲಿಯಾನಾ ಹರಾಜು ಜಾಗಗಳು ಈ ಕೆಳಗೆ ನಮೂದಾಗುವ ಜಾಗಾಗಳಲ್ಲಿ ಅನ್ಯಗಳ ಬಾಜಾದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾಯ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರವರು ಪ ಫಾರೆಸ್ಟ್ ಆಫಿಸರರುಗಳಿಂದ ನಡಿಸಲ್ಪಡುವವು.

ಹುಣಸೂರು ಕೋಟಿ ..	14ನೇ ಡಿಸಂಬರ್ 1889 ..	600	ಟನ್‌ಗಳು
ಬೆಂಗಳೂರು ಡಿಸ್ಟ್ರಿಕ್ಟ್—ಬೆಂಗಳೂರು ಕೋಟಿ	19ನೇ ಡಿಟೋ ..	150	ಡಿಟೋ

ಹರಾಜಿನ ಷರತ್ತುಗಳು—1887ನೇ ಇಸವಿ ಆಗಸ್ಟ್ 27 ಮತ್ತು ಸೆಪ್ಟಂಬರ್ 3ನೇ ತಾರೀಖುಗಳ 34, 35ನೇ ನಂಬರ್ ಗೆಜೆಟ್ ಗಳಲ್ಲಿ ಫಾಯಿಷ್ ಮಾಡಲ್ಪಟ್ಟ ಇಸ್ತಿಹಾರ್‌ಗಳನ್ನ ನೋಡಿಕೊಳ್ಳತಕ್ಕದ್ದು. ಮತ್ತು ಸದರೀ ಇಸ್ತಿಹಾರ್‌ಗಳು ಹರಾಜ್ ಕಾಲದಲ್ಲಿ ಓದಲ್ಪಡುವವು.

ನೋಟಿಫಿಕೇಷನ್.

ತಾರೀಖು 16ನೇ ನವಂಬರ್ 1889.

ಸನ 1878ನೇ ಇಸವಿ ಮೈಸೂರ ಫಾರೆಸ್ಟ್ ರೂಲ್ಸಿನ 2ನೇ ಅಧ್ಯಾಯ 12ನೇ ಸೆಕ್ಷನ್ ಅನುಸಾರ, ತಿಮಾರ್ಕೇಷನ್ ಮಾಡಿದ ಕುಕ್ಕುವಾಡ, ಉಬ್ರಾಣಿ, ಮನ್ನಾ ಜಂಗಲ್‌ವಳಗೆ ಈ ಕೆಳಗೆ ನಮೂದಿಸಿರುವ ರಸ್ತೆಗಳ ಹೊರತಾಯಿ ಹಾಲೀ ಉಪಯೋಗದಲ್ಲಿರುವ ಇತರ ಯಾವ್ಲಾ ರಸ್ತೆಗಳೂ, ಭಂಡೀದಾರಿಗಳೂ ಮತ್ತು ಕಾಲುಹಾದಿಗಳೂ ಸಹ ಸಕಲ ಜನರಿಗೂ ಇದರಿಂದ ಬಂದ್ ಮಾಡಲ್ಪಟ್ಟಿರುತ್ತದೆ.

1. ಜೋಳದ ಹಾಳಿನಿಂದ ಕುಕ್ಕುವಾಡಮ್ಮನ ಗುಡಿ ಮಾರ್ಗವಾಗಿ ಮಳಲ್‌ಭಾವಿ ವರೆಗೆ.
2. ಬಿಂಕ್ತಿಪುರದಿಂದ ಗಂಗೂರ ಮಾರ್ಗವಾಗಿ ಮಳಲ್‌ಭಾವಿಗೆ.
3. ಗಂಗೂರಿಂದ ನುಲೆಬ್ಬಲಿ ಮಾರ್ಗವಾಗಿ ಬಾನವಾಡಿಗೆ.
4. ಗಂಗೂರಿಂದ ದೊಡ್ಡೇರಿ ಮಾರ್ಗವಾಗಿ ಹಾದಿಗೆರೆಗೆ.
5. ಮಾವಿನಹೊಳೆ ಯಿಂದ ಬಿದರೆಮಲ್ಲೇನಹಳ್ಳಿ, ಮಾರ್ಗವಾಗಿ ಕುಕ್ಕುವಾಡಮ್ಮನಗುಡಿಗೆ.
6. ಉಬ್ರಾಣಿಯಿಂದ ಮಳಲ್‌ಭಾವಿಗೆ.

ಸನ 1890ನೇ ಇಸವಿ ಜನವರೀ ಗುರ್ತೀ ಲಾಗಾಯತು ಇಲ್ಲಿ ನಮೂದಾದ ರಸ್ತೆಗಳ ಹೊರತಾಯಿ ಇತರ ರಸ್ತೆಮೇಲೆ ಯಾ ಕಾಲುದಾರೀ ಮೇಲೆ ಯಾರಾದರೂ ಹೋದ ಪಕ್ಷಕ್ಕೆ ಮನ್ನಾ ಜಂಗಲ್ ಒಳಗೆ ಅತಿಕ್ರಮ ಪ್ರವೇಶವೆಂದು ಎಣಿಸಲ್ಪಟ್ಟು ನ್ಯಾಯವಾಗಿ ಕೇಸ್ಸಿಗೆ ಗುರಿಮಾಡಲ್ಪಡುವರು.

ಕಬ್ಬಿಣ ಕರಗಿಸುವವರು ಕಬ್ಬಿಣದ ಕಲ್ಲು ತರುವದಕ್ಕೋಸ್ಕರವೂ ಮನ್ನಾಜಂಗಲ್ ವಳಗೆ ಯಿರುವ ಇತರ ವೃಕ್ಷಗಳನ್ನು ತಗ ರುಕೊಳ್ಳುವದಕ್ಕೆ ಸ್ವತಂತ್ರವನ್ನು ಪಡದಂಥಾ ಜನರು ಫಾರೆಸ್ಟ್ ಆಫಿಸರಿಂದ ಪ್ಯಾಸ್ ಪಡಿಯತಕ್ಕದ್ದು, ಮತ್ತು ಕೇಳಿದಾಗ ಸದರೀ ಪ್ಯಾ ಸನ್ನು ಹಾಜರ್ ಪಡಿಸುವದಕ್ಕೆ ತಿದ್ದವಾಗಿರಬೇಕು.

ಎಲ್. ರೈಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 961.

ಮಾಗಡಿ ತಾಲ್ಲೂಕು ಗುಡೇಮಾರನಹಳ್ಳಿ ಇದ್ದು ಮೃತಪಟ್ಟ ಕೆಟ್ಟಿ ನಂಜಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರಳು ನಂಜಮ್ಮ, ಮೃತಪಟ್ಟ ಸದರೀ ಕೆಟ್ಟಿ ನಂಜಪ್ಪನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಗುಡೇಮಾರನಹಳ್ಳಿ ಸ್ಥಳದ ನಂಜಮ್ಮನು ಸದರೀ ಗುಡೇಮಾರನಹಳ್ಳಿ ವಾಸಸ್ಥನಾಗಿ ಮೃತಪಟ್ಟ ಕೆಟ್ಟಿ ನಂಜಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ನಂಜಮ್ಮನ ಅರ್ಜಿಯನ್ನು 1889ನೇ ಇಸವಿ ಡಿಸಂಬರ್ ತಿಂಗಳು ತಾರೀಖು 20ನ್ನು ಕೇಳಿ ಸರ ಟಿಫಿಕೇಟು ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೆಟ್ಟಿ ನಂಜಪ್ಪನ ಆಸ್ತಿಗೆ ಹಕ್ಕುದಾ ರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಅರ್ಜೀ ನಂಬರ್ 963.

ಬೆಂಗಳೂರಲ್ಲಿ ವಾಸವಾಗಿ ಇದ್ದು ಮೃತಪಟ್ಟ ಮಳವಳ್ಳಿ ಚಿಂದಗಿರಿಯಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಮಳವಳ್ಳಿ ಚಿಕ್ಕತಿಮ್ಮಪ್ಪ ಪುರಭ' ಪಾಪಂಣ ಮೃತಪಟ್ಟ ಸದರೀ ಚಿಂದಗಿರಿಯಪ್ಪನಿಗೆ ಮಗನು ಆಗಬೇಕೆಂಬ ಹಕ್ಕು ದಾರೀ ಮೇಲೆ ಬೆಂಗಳೂರು ಸ್ಥಳದ ಚಿಕ್ಕತಿಮ್ಮಪ್ಪ ಪುರಭ' ಪಾಪಂಣನು ಬೆಂಗಳೂರು ವಾಸಸ್ಥನಾಗಿ ಮೃತಪಟ್ಟ ಚಿಂದಗಿರಿಯಪ್ಪನ ಜಿಂ ದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ. –

ಸದರೀ ದರಖಾಸ್ತುದಾರನಾದ ಚಿಕ್ಕತಿಮ್ಮಪ್ಪ ಪುರಭ' ಪಾಪಂಣನ ಅರ್ಜಿಯನ್ನು 1889ನೇ ಇಸವಿ ಡಿಸಂಬರ್ ತಿಂಗಳು ತಾರೀ ಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿಂದಗಿರಿ ಯಪ್ಪನ ಆಸ್ತಿಗೆ ಹಕ್ಕುದಾರಾರದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಅರ್ಜೀ ನಂಬರ್ 960.

ತುಮಕೂರು ಡಿಸ್ಟ್ರಿಕ್ಟು ಮದ್ದಗಿರಿ ಕನಟಾದಲ್ಲಿ ಇದ್ದು ಮೃತಪಟ್ಟ ಕುಂಚಿಗರ ಕಾಮಂಣನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೇ ದೊಡ್ಡ ಮಲ್ಲಯ್ಯ, 2ನೇ ಚಿಕ್ಕ ಮಲ್ಲಯ್ಯ ಇವರು ಮೈನರ್ ಇವರ ಗಾರ್ಡಿಯಾ ತಾಯಿ ರಂಗಮ್ಮ ಮೃತ ಪಟ್ಟ ಸದರೀ ಕಾಮಂಣನಿಗೆ ಮೈನರಗಳು ಮಕ್ಕಳು ಆಗಬೇಕೆಂಬ ಹಕ್ಕುದಾರೀ ಮೇಲೆ ಮದ್ದಗಿರಿ ಸ್ಥಳದ ರಂಗಮ್ಮನು ಮದ್ದಗಿರಿ ನಾ ಸಸ್ಥನಾಗಿ ಮೃತಪಟ್ಟ ಕಾಮಂಣನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆ ಕ್ಟು ಮೇರಿಗೆ ಸರಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ರಂಗಮ್ಮನ ಅರ್ಜಿಯನ್ನು 1889ನೇ ಇಸವಿ ಡಿಸಂಬರ್ ತಿಂಗಳು ತಾರೀಖು 20ರಲ್ಲು ಕೇಳಿ ಸರಟಿಫಿ ಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕಾಮಂಣನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಡಿಸಂಬರ್ ತಿಂಗಳು 4ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನನ್ನ ದಸ್ತಖತ್ತೊಡನೆ ಈ ಜಡ್ಜ್‌ಮೆಂಟ್ ಆಗಿದೆ.

ಎಲ್. ಅನಂತಸ್ವಾಮಿರಾವ್,
ಸಬ್ ಜಡ್ಜಿ.